ಚಾರಣಕ್ಕೆಂದು ಹೋಗಿದ್ದಾರೆ. ನಡುವೊಮ್ಮೆ ಕುಳಿತು ದಣಿವಾರಿಸಿಕೊಳ್ಳುತ್ತಿದ್ದಾಗ ಹತ್ತಿರದಲ್ಲೇ ಆನೆ ಘೀಳಿಟ್ಟಿದ್ದು ಕೇಳಿ ಬೆಚ್ಚಿದ್ದಾರೆ. ಸಮೀಪದ ತೋಪಿನಿಂದ ದೈತ್ಯಾಕಾರದ ಆನೆಯೊಂದು ನುಗ್ಗಿಬಂದಾಗ ಇಬ್ಬರೂ ದಿಕ್ಕಾಪಾಲಾಗಿ ಓಡಿದ್ದಾರೆ. ಸ್ವಲ್ಪ ಸಮಯದ ಬಳಿಕ ಆನೆಯ ಸದ್ದಿನೊಂದಿಗೆ ಜೊತೆಯಲ್ಲಿ ಓಡಿ ಬರುತ್ತಿದ್ದ ಸುನೇತ್ರಳ ಸದ್ದೂ ಮಾಯವಾಗಿದೆ. ಹುಡುಕುವ ತನಕ ಹುಡುಕಿ ಮಾಲಿನಿ ಪೊಲೀಸರಿಗೆ ಕರೆ ಮಾಡಿದ್ದಾಳೆ. ಈಗ ಎಲ್ಲರೂ ಸೇರಿ ಬನ್ನೇರುಘಟ್ಟದ ಕಾಡಿನಲ್ಲಿ ಹುಡುಕುತ್ತಿದ್ದಾರೆ.

ಮನೆಯ ಪಜಾಮದ ಮೇಲೇ ಒಂದು ಶರ್ಟು ತೊಟ್ಟು ಓಡುನಡಿಗೆಯಲ್ಲಿ ಹೆಜ್ಜೆಯಿಟ್ಟು ಕಾರು ಸ್ಟಾರ್ಟ್ ಮಾಡಿದೆ. ಎಷ್ಟೇ ದೀರ್ಘವಾಗಿ ಉಸಿರಾಡಲು ಪ್ರಯತ್ನಿಸಿದರೂ ಮನಸ್ಸು ಸ್ಥಿಮಿತಕ್ಕೇ ಬರಲಿಲ್ಲ. "ಆಗಿರಲಾರದು, ಆಗಿರಲಾರದು" ಅಂತ ನನಗೆ ನಾನೇ ಮತ್ತೆ ಮತ್ತೆ ಹೇಳಿಕೊಂಡೆ. ಸ್ಟಿಯರಿಂಗ್ ವ್ಹೀಲ್ ಮೇಲಿನ ಕೈಗಳು ಥರಥರ ನಡುಗುತ್ತಿದ್ದವು. ಮಧ್ಯರಾತ್ರಿಯ ಚಳಿಯಲ್ಲೂ ಇಡೀ ದೇಹ ಬೆವರುತ್ತಿತ್ತು. ಒಂದು ಬಾರಿ, ಒಂದೇ ಬಾರಿ ಸುನೇತ್ರಾ ಸಿಕ್ಕಿ, "ಏನೂ ಆಗಿಲ್ಲ ಅಣ್ಣಾ, ಅಲ್ಲೇ ಕಳೆದು ಹೋಗಿದ್ದೆ ಅಷ್ಟೇ" ಅಂತ ನಗುತ್ತ ಮನೆಗೆ ಬಂದು ಬಿಡಲಿ ಅಂತ ಕಲ್ಪಿಸಿಕೊಳ್ಳುತ್ತ ಕಣ್ಣಲ್ಲಿ ಧಾರಾಕಾರ ನೀರು ಹರಿಯತೊಡಗಿತ್ತು.

ಬನ್ನೇರುಘಟ್ಟ ತಲುಪಿದಾಗ ಅಲ್ಲಲ್ಲಿ ಸ್ಪಾಟ್‌ಲೈಟುಗಳು ಮಾತ್ರ ಕಾಣುತ್ತಿದ್ದವು. ಅಲ್ಲೇ ಕಾಯುತ್ತಿದ್ದ ಗಾರ್ಡ್ ಒಬ್ಬನಿಂದ ಈಗ ಹುಡುಕುವ ಕೆಲಸವನ್ನು ನಿಲ್ಲಿಸಿದ್ದೂ, ಮುಂಜಾನೆ ಆರು ಗಂಟೆಗೆ ಮತ್ತೆ ಪುನರಾರಂಭಿಸಲಿರುವುದೂ ತಿಳಿಯಿತು. "ಈ ವಮ್ಮಗಳಿಂದ ಬೋ ಕಷ್ಟ ಸಾ. ಅಲ್ಲಾ, ಇವರು ಮಜಾ ಮಾಡೋಕಂತ ಕಾಡಿನೊಳಗೆ ಹೋಗಿ ಈಗ ನಮಗೆ ಎಂಥ ಇಕ್ಕಟ್ಟು ತಂದಿಟ್ಟಿದಾರೆ ನೋಡಿ" ಅಂತ ಬೀಡಿ ಹಚ್ಚಿದ. ಅನಂತರ, "ಓ ನಿಮ್ ತಂಗೀನಾ ಸಾ? ಸಿಗ್ತಾರೆ ಬುಡಿ, ಎಲ್ಲಿ ಹೋಗ್ತಾರೆ" ಅಂತ ಮೌನವಾದ. ಮುಂಜಾನೆ ಚೆನ್ನೈನಿಂದ ವಿಶೇಷ ದಳದವರು ಬರುವವರಿದ್ದರು.

ಮುಂದಿನ ಮೂರು ದಿನ ಚುರುಕಿನ ಕಾರ್ಯಾಚರಣೆಯಾಯಿತು.

ಮೂರು ದಿನಗಳ ಕೊನೆಗೆ ಸುನೇತ್ರಾಳ ಬಾತುಕೊಂಡ ಶವ ಬನ್ನೇರುಘಟ್ಟದ ತಪ್ಪಲೊಂದರಲ್ಲಿ ಸಿಕ್ಕಿತು. ಸುದ್ದಿ ಕೇಳಿದೊಡನೆ ಪೊಲೀಸ್ ದಳದೊಂದಿಗೆ ಮೂಗಿಗೆ ಕರ್ಚೀಫಿಟ್ಟುಕೊಂಡು ನಾನೂ ಸ್ಥಳಕ್ಕೆ ಓಡಿದೆ. ಅವಳ ದೇಹದ ಮೇಲೆ ಆನೆಯೊಂದು ತಿರುತಿರುಗಿಸಿ ಎಸೆದ ಹಾಗೆ ಕುರುಹುಗಳಿದ್ದವು. ಹತ್ತಿರದಲ್ಲೇ ಒಂಟಿ ಕಾಲಿನ ಚಪ್ಪಲಿ, ಫೋನು, ಹ್ಯಾಂಡ್‌ಬ್ಯಾಗುಗಳು ದೊರಕಿದವು. ಅಲ್ಲಿನ ಆಘಾತಕ್ಕೆ ನಮಗ್ಯಾರಿಗೂ ಮಾತೇ ಹೊರಡಲಿಲ್ಲ.

ಲಾವಣ್ಯಾ, "ಹಾಗೆಲ್ಲಾ ನಿಷೇಧಿತ ಅರಣ್ಯದಲ್ಲಿ ಹೋಗೋಳೇ ಅಲ್ಲ ಅವಳು. ಅದೇನು ನಸೀಬು ಕೆಟ್ಟಿತ್ತೋ" ಅಂತ ಅವಲತ್ತುಕೊಂಡಳು. ಅಮ್ಮ ಮಾತ್ರ, "ಯಾವತ್ತಿದ್ದರೂ ಅಷ್ಟೇ. ನನ್ನ ಹೊಟ್ಟೆ ಉರಿಸಿದ್ದೇ ಬಂತು. ನನ್ನನ್ನ ನರಳಿಸಲಿಕ್ಕೆಂದೇ ಹುಟ್ಟಿದವಳು ಅವಳು" ಅಂತ ಮೂಲೆ ಹಿಡಿದು ಕುಳಿತು ಬಿಟ್ಟರು.

★★★

ಅಂದು ರಾತ್ರಿ ಮನೆಗೆ ಹೋದಾಗ ಹತ್ತು ಗಂಟೆಯೇ ಆಗಿತ್ತೇನೋ. ಮಧ್ಯಾಹ್ನ ದಾದಾನ ಹುಡುಗರು ನಮ್ಮ ಆಫೀಸಿನ ಲಾಬಿಯಲ್ಲಿ ಕಾಲು ಚಾಚಿ ಕುಳಿತು ಸಿಗರೇಟು ಸೇದುತ್ತಿದ್ದುದನ್ನು ಕಂಡು ಸುನೇತ್ರಾ ನನ್ನ ಕೋಣೆಗೆ ಬಂದು ದೊಡ್ಡ ಜಗಳವನ್ನೇ ಮಾಡಿ ಹೋಗಿದ್ದಳು. ಪೊಲೀಸು, ಮಾನ ಹರಾಜು ಹಾಕುವುದು, ಒಡಹುಟ್ಟಿದವನು ಅಂತಲೂ ಕರುಣೆ ತೋರಿಸದಿರುವುದು ಮುಂತಾದ ಮಾತುಗಳೆಲ್ಲ ಅವಳ ನಾಲಿಗೆಯಿಂದ ಪುಂಖಾನುಪುಂಖವಾಗಿ ಹೊರಬಿದ್ದಿದ್ದವು. ಸರಿ, ಇದಕ್ಕೆಲ್ಲ ಏನಾದರೂ ಪರಿಹಾರ ಹುಡುಕುತ್ತೇನೆ ಎಂದು ಶಾಂತವಾಗಿಯೇ ಅವಳನ್ನು ಮನೆಗೆ ಸಾಗ ಹಾಕಿದ್ದೆ. ರಾತ್ರಿ ನಾನು ಹೋದಾಗ ಎಲ್ಲರೂ ಊಟ ಮಾಡಿ ಅವರವರ ಕೋಣೆಯಲ್ಲಿ ನಿದ್ದೆ ಹೋಗಿದ್ದರು.